# ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಅಕ್ಟೋಬರ್/ನವೆಂಬರ್ 2024

## ವಿಷಯ : ಕನ್ನಡ (01)

ಸಮಯ : 3 ಗಂಟೆಗಳು    ಅಂಕಗಳು : 80

ಸೂಚನೆ :

"ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### ಅ–ವಿಭಾಗ

**I ಅ. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** 10x1=10

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು ?
   ಅ) ಅಶೋಕವನ   ಆ) ಪ್ರಮದವನ   ಇ) ಉದ್ಯಾನವನ   ಈ) ಚೈತ್ರವನ
2. ಯಾವುದರಿಂದ ಪರಿಮಳವನ್ನು ಅರಿಯಬಹುದು ?
   ಅ) ಮರಗಳಿಂದ   ಆ) ಹಣ್ಣುಗಳಿಂದ   ಇ) ಪುಷ್ಪಗಳಿಂದ   ಈ) ಕಾಂಡಗಳಿಂದ
3. ವಲ್ಲಭೆಯೆ ಬರವೇನು ಮುಖದಲ್ಲಿ
   ತಲ್ಲಣವೆ ತಲೆದೋರುತಿದೆ ತಳು
   ವಿಲ್ಲದು ಸುರಿರುಳೇಕೆ ಬಂದೆ ಲತಾಂಗಿ ಹೇಳೆಂದ– ಈ ಪದ್ಯಭಾಗದಲ್ಲಿ ಹೀಗೆಂದು ದ್ರೌಪದಿಯನ್ನು ಪ್ರಶ್ನಿಸಿದವರು ಯಾರು ?
   ಅ) ಭೀಮ   ಆ) ಧರ್ಮರಾಯ   ಇ) ಅರ್ಜುನ   ಈ) ನಕುಲ
4. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ ?
   ಅ) ವೀರನೆಂದು   ಆ) ಶತ್ರುವೆಂದು   ಇ) ಸ್ನೇಹಿತನೆಂದು   ಈ) ಬಾಲಕನೆಂದು
5. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು ?
   ಅ) ಬೇವಿನ ಮರ   ಆ) ಮಾವಿನ ಮರ   ಇ) ತೆಂಗಿನ ಮರ   ಈ) ಆಲದ ಮರ
6. ನಾಗರೀಕತೆಯ ಉನ್ನತಿಯ ಆದರ್ಶದೊಡನೆ ಆರಂಭವಾಗುವ ಅಭಿವೃದ್ಧಿಯು ಏನಾಗುತ್ತದೆ ?
   ಅ) ದೂರದೃಷ್ಟಿ ಒಳನೋಟವಿರುವ ಅಭಿವೃದ್ಧಿಯಾಗುತ್ತದೆ.   ಆ) ಮನುಕುಲದ ಪತನಕ್ಕೆ ಕಾರಣವಾಗುತ್ತದೆ.
   ಇ) ಮಾನವ ಸಾಮರ್ಥ್ಯಕ್ಕೆ ದಕ್ಕಿದ ವಿಜಯವಾಗಿದೆ.   ಈ) ಸದೃಢ ಆರ್ಥಿಕತೆಗೆ ಸಹಕಾರಿಯಾಗಿದೆ.
7. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ ?
   ಅ) ಕಮಲಮ್ಮ   ಆ) ಕೀರ್ತಿ   ಇ) ಸೀತಾ   ಈ) ಮುದ್ದೇಗೌಡರು
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು ?
   ಅ) ಕತ್ತಿ   ಆ) ಪಿಕಾಸಿ   ಇ) ಕೋವಿ   ಈ) ಕೊಡಲಿ
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
   ಅ) ಪ್ರಕಾಶ   ಆ) ದುರ್ಗಪ್ಪ   ಇ) ಕೃಷ್ಣೇಗೌಡ   ಈ) ಪುಟ್ಟಯ್ಯ
10. "ಏನ್ ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರ ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈ ವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ?" ____ಲೈನ್‌ಮನ್ ದುರ್ಗಪ್ಪನ ಮಾತುಗಳು ಆತನ ಕೆಲಸದ ಬಗ್ಗೆ ಏನನ್ನು ಸೂಚಿಸುತ್ತದೆ?
    ಅ) ಸುಲಭದ ಕೆಲಸ   ಆ) ಕಷ್ಟಕರವಾದ ಕೆಲಸ   ಇ) ಆಸೆಯ ಕೆಲಸ   ಈ) ಅಪಾಯಕಾರಿ ಕೆಲಸ

**ಆ. ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ :** 5x1=5

**[ನಿಶಾಶರ್ಮ, ಸಿಂಹಬಾಲದ ಕೋತಿ, ಸಿದ್ಲಿಂಗಿ, ಬೌದ್ಧ ಧರ್ಮ, ಶಿವಸುಬ್ರಹ್ಮಣ್ಯ ಅಯ್ಯರ್, ಡಾ|| ಸಿ. ಎನ್. ಆರ್. ರಾವ್]**

11. ಬಸಲಿಂಗನ ಹೆಂಡತಿಯ ಹೆಸರು ________
12. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ________
13. ದುರಾಸೆಯ ಹುಡುಗನನ್ನು ನಿರಾಕರಿಸಿದವರು ________
14. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ________
15. ಕನ್ನಡ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ________

**ಇ. ಹೊಂದಿಸಿ ಬರೆಯಿರಿ:** **5x1=5**

| | | | |
|---|---|---|---|
| 16. | ಅ. ನಾಗಚಂದ್ರ | – | 1. ರೂಪಕ ಸಾಮ್ರಾಜ್ಯದ ಚಕ್ರವರ್ತಿ |
| | ಆ. ಬಸವಣ್ಣ | – | 2. ಕೂಡಲ ಸಂಗಮ ದೇವಾ |
| | ಇ. ಕುಮಾರವ್ಯಾಸ | – | 3. ಪುರಂದರ ದಾಸರು |
| | ಈ. ಜಾಲಿಯ ಮರದಂತೆ | – | 4. ಕದಡಿದ ಸಲಿಲಂ ತಿಳಿವಂದದೆ |
| | ಉ. ಹಬ್ಬಲಿ ಅವರ ರಸಬಳ್ಳಿ | – | 5. ಸೋಮೇಶ್ವರ ಶತಕ |
| | | | 6. ಗರತಿಯ ಹಾಡು |

## ಆ–ವಿಭಾಗ

**II ಅ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

17. ಸೀತೆಯ ತಲ್ಲಣಕ್ಕೆ ಕಾರಣವೇನು ?
18. ಗುರುವಿನ ಲಕ್ಷಣಗಳಾವುವು ?
19. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ ? ಏಕೆ ?
20. ಹಡೆದವ್ವನನ್ನು ಯಾವಾಗ ನೆನೆಯಬೇಕು ?

**ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x2=4**

21. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?
22. ಬ್ರಿಟಿಷರು ಬರುವ ಮೊದಲು ವಾಲ್‌ಪರ್ರೈ ಹೇಗಿತ್ತು ?
23. ತಾನು ಅದೃಷ್ಟವಂತೆಯೆಂದು ಲೇಖಕಿ ಭಾವಿಸಲು ಕಾರಣವೇನು ?
24. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾ.ಮಾ.ನಾ ಅಪೇಕ್ಷಿಸಿದ್ದಾರೆ ?

**ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು ?
26. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
27. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?
28. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

## ಇ–ವಿಭಾಗ

**III ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **2x3=6**

29. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.
30. ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ.
31. ಹಬ್ಬಲಿ ಅವರ ರಸಬಳ್ಳಿ

**ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

32. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ !
33. "ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ"
34. ಒಂದೊಂದು ಭಾಷೆಯೂ ಒಂದೊಂದು ವರ.

**ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

35. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.
36. ವೆಪನ್ ಸರ್, ವೆಪನ್ ನಮಗೆ ಮುಖ್ಯ.

## ಈ–ವಿಭಾಗ

**IV ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

37. ಪ್ರಮದವನದಲ್ಲಿ ರಾವಣ – ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.
38. ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ ?
39. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

40. **ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.**

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ॥
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

ಅ) ಪದ್ಯಭಾಗದಲ್ಲಿ ಶಾಸ್ತ್ರಂಗಳನ್ನು ಏನು ಮಾಡಬೇಕೆಂದು ಹೇಳಿದ್ದಾನೆ. (1 ಅಂಕ)

ಆ) ಈ ಪದ್ಯದ ಕವಿಯ ಅಂಕಿತ ಯಾವುದು ? (1 ಅಂಕ)

ಇ) ಮನುಷ್ಯ ಯಾವಾಗ ಸರ್ವಜ್ಞನಾಗುತ್ತಾನೆಂದು ಕವಿ ಹೇಳಿದ್ದಾನೆ, ಸಮರ್ಥಿಸಿ. (2 ಅಂಕ)

**ಆ. ಯಾವುದಾದರೂ <u>ಒಂದು</u> ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

41. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?

42 ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ ?

**ಇ. ಯಾವುದಾದರೂ <u>ಒಂದು</u> ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

43. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ ?

44. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯ ಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ ?

**ಉ–ವಿಭಾಗ (ಭಾಷಾಭ್ಯಾಸ)**

**V ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ <u>ನಾಲ್ಕಕ್ಕೆ</u> ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

45. **ಕೆಳಗಿನ ಎರಡು ಪದಗಳ ನಾನಾರ್ಥ ಪದಗಳನ್ನು ಬರೆಯಿರಿ.**
ಕರ, ದೊರೆ, ಅರಿ

46. **ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ ಬರೆಯಿರಿ.**
ವಕ್ರಪದ್ಮ, ರಸಬಳ್ಳಿ, ಕಿರುಹಾದಿ

47. **ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.**
ಮುಖದಲ್ಲಿ, ಕೀರ್ತಿಗೆ, ಮನೆಯಿಂದ

48. **ಕೆಳಗಿನ ಎರಡು ಕ್ರಿಯಾಪದಗಳ ಕಾಲವನ್ನು ಬರೆಯಿರಿ.**
ಆಗಮಿಸಿದ, ತಿನ್ನುತ್ತಾರೆ, ಹುಡುಕುವನು

49. **ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.**

50. **ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**
ಪರದೇಶಿ, ತಲೆಬಾಗು, ಸಿಂಹಸ್ವಪ್ನ

**ಆ. ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=4**

51. ಪುಸ್ತಕಗಳ ಮಹತ್ವ

**ಅಥವಾ**

ಬಾಲ್ಯದ ನೆನಪುಗಳು.

**ಇ. ಇವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.** **1x4=4**

52. ಬೃಂದ/ ರವಿ ದ್ವಿತೀಯ ಪಿಯುಸಿ ಅಂಬೇಡ್ಕರ್ ಪದವಿ ಪೂರ್ವ ಕಾಲೇಜು, ಜೆ.ಸಿ.ನಗರ, ಬೆಂಗಳೂರು ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರವನ್ನು ಕೋರಿ ಪತ್ರ ಬರೆಯಿರಿ.

**ಅಥವಾ**

ರಾಜೇಶ್ / ಕಾವ್ಯ ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು. ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಮೋಹನ, # 21, ಕಾರಂತ ರಸ್ತೆ, ಜಯಲಕ್ಷ್ಮಿಪುರ, ಮೈಸೂರಿನಲ್ಲಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ನೀಡುವಂತೆ ಕೋರಿ ಪತ್ರ ಬರೆಯಿರಿ.

*****